‘ಮನೆಯಲ್ಲಿ ನನಗೆ ನಿನ್ನ ವಯಸ್ಸಿನ ಒಬ್ಬಳು ಸೋದರಿ ಇದ್ದಾಳೆ. ಅವಳು ನನಗಾಗಿ ನುಡಿಸುತ್ತಾಳೆ’ ಎಂದೆ.

‘ನಾನು ಸಂಗೀತವನ್ನು ಬಹಳ ತಿಳಿದಿಲ್ಲ. ನೀವು ಯಾವ ಸಂಗೀತ ಕೇಳಲು ಇಷ್ಟಪಡುತ್ತೀರಿ.’

‘ನಾನು ಕೆಲವನ್ನು ಆಯ್ಕೆ ಮಾಡಲೇ? ನೀನು ಸ್ವಲ್ಪ ನುಡಿಸು. ನಿನ್ನ ಹತ್ತಿರ ಯಾವ ಸಂಗೀತ ಸ್ವರಗಳು ಇದೆ ಎಂದು ಗೊತ್ತಾಗುತ್ತದೆ.’

ಕರಿಯ ಚರ್ಮದ ಪೆಟ್ಟಿಗೆಯಲ್ಲಿ ಇದ್ದ ಹಳೆಯ ಸಂಗೀತದ ಡಬ್ಬಿಯನ್ನು ಮ್ಯಾಗಿ ಹೊರಗೆ ತಂದಳು. ನಾನು ಅದನ್ನು ತೆರೆದೆ. ಬಹಳಷ್ಟು ಲಘು ಸಂಗೀತದ ಶೀರ್ಷಿಕೆ, ಗುಡ್ ಬೈ ಡಾಲಿಗ್ರೆ, ಮಧುಪಾನ, ಮತ್ತು ಜೇನ್ನೊಣ ಇತ್ಯಾದಿ. ಕೆಲವು ಒಳ್ಳೆಯವು ಇದ್ದವು, ಅದರಲ್ಲಿ ಹಳೆಯ ಶೈಲಿಯ ರಾಬಿನ್ ಅಡೇರ್, ಅನ್ನಿಲೂರಿಕ್ ಶಿಶಿರದ ಕೊನೆಯ ಗುಲಾಬಿ ಇತ್ಯಾದಿ. ಇನ್ನೂ ಕೆಲವು ಉನ್ಮಾದಕ ಹಾಡುಗಳು ಇದ್ದವು. ನಾನು ಅದರಲ್ಲಿ ಸ್ಕಾಟ್‌ಲೆಂಡಿನ ನೀಲಿಗಂಟೆಯನ್ನು ಆಯ್ಕೆ ಮಾಡಿ ಮ್ಯಾಗಿಗೆ ಕೊಟ್ಟೆ. ಮ್ಯಾಗಿ ವಯಲಿನ್‌ನಲ್ಲಿ ಅದನ್ನು ನುಡಿಸಿದ ಮೇಲೆ ನಾನು ಆ ಧ್ವನಿಯನ್ನು ಗುನುಗುನಿಸುತ್ತಾ ತಲೆದೂಗಿದೆ.

ಹಾಡು ಮುಗಿದ ಮೇಲೆ ನಾನು ಅವಳನ್ನು ಮುಕ್ತ ಕಂಠದಿಂದ ಶುಭ ಕೋರಿದೆ. ‘ಮ್ಯಾಗಿಗೆ ಸಂಗೀತ ಅಭ್ಯಾಸ ಮಾಡುವ ಅವಕಾಶ ಸಿಕ್ಕಿಲ್ಲ. ಅವಳು ತನಗೆ ತಿಳಿದ ಮಟ್ಟಿಗೆ ಕಲಿತಿದ್ದಾಳೆ ಎಂದು ಮಿಸೆಸ್ ಕ್ಲಿಫರ್ಡ್ ಹೇಳಿದರು. ನಮ್ಮ ಆರ್ಥಿಕ ಸ್ಥಿತಿ ಸುಧಾರಿಸಿದರೆ ನಾನು ಅವಳಿಗೆ ಒಳ್ಳೆಯ ಅವಕಾಶ ಕಲ್ಪಿಸುತ್ತೇನೆ’ ಎಂದರು ಮಿಸೆಸ್ ಕ್ಲಿಫರ್ಡ್.

‘ಮ್ಯಾಗಿ ಇನ್ನಷ್ಟು ನುಡಿಸು’ ಎಂದೆ. ಮತ್ತೇನು ಹಾಡಲಿ ಎಂದು ಸಂಕೋಚದಿಂದ ಹೇಳಿದಳು. ಅವಳ ಹಾಡುಗಳಲ್ಲಿ ಶಾಸ್ತ್ರೀಯವಾದ ಅದರಲ್ಲೂ ಪ್ರಚಲಿತ ಸಂಗೀತದ ಸಂಗ್ರಹಕ್ಕಾಗಿ ಕಣ್ಣಾಡಿಸಿದೆ. ಅದರಲ್ಲಿ ಕೆಲವು ಅಷ್ಟೇನೂ ಉತ್ಕೃಷ್ಟವಲ್ಲದ ಒಂದು ಹಾಡಿತ್ತು. ಅದು ಗೋನಾಲಿಕ ಅಪೇರಾದ ಕುಸುಮ ಸಂಗ್ರಹ, ಇದನ್ನು ನುಡಿಸು ಎಂದೆ.

ಆಕೆ ಅದನ್ನು ನುಡಿಸಿದಳು. ಅವಳು ವಯೋಲಿನ್ ನುಡಿಸಿದ ಮೇಲೆ ನಾನು ಮೂಕವಿಸ್ಮಿತನಾದೆ. ಅದು

